ಸಂದರ್ಭದಲ್ಲಿ ಕನ್ನಡ ಹಾಗೂ ಕನ್ನಡಿಗರ ಅಸ್ಮಿತೆಯ ಪ್ರಶ್ನೆಯಾಗಿ ಚಳವಳಿಯೊಂದು ರೂಪುಗೊಂಡಿತು. ಕಾದಂಬರಿಕಾರರಾದ ಅ.ನ. ಕೃಷ್ಣರಾಯರು ಹಾಗೂ ಮ. ರಾಮಮೂರ್ತಿ ಅವರ ನೇತೃತ್ವದಲ್ಲಿ ರೂಪುಗೊಂಡ ಕನ್ನಡ ಜಾಗೃತಿಯ ಧ್ವನಿ, ಡಬ್ಬಿಂಗ್ ವಿರೋಧಿ ನೀತಿಯನ್ನೂ ತನ್ನ ಚಳವಳಿಯ ಭಾಗವಾಗಿಸಿಕೊಂಡಿತು.

ನಲವತ್ತೆರಡನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (1960, ಮಣಿಪಾಲ) ಕೇಳಿಸಿದ 'ಡಬ್ಬಿಂಗ್ ವಿರೋಧಿ' ಕೂಗು ಮುಂದಿನ ದಿನಗಳ 'ಡಬ್ಬಿಂಗ್ ವಿರೋಧಿ ಚಳವಳಿ'ಗೆ ಮುನ್ನುಡಿಯಂತಿತ್ತು. ಸಮ್ಮೇಳನದ ಅಧ್ಯಕ್ಷ ಅ.ನ. ಕೃಷ್ಣರಾಯರು ತಮ್ಮ ಭಾಷಣದಲ್ಲಿ ಕನ್ನಡ ಚಿತ್ರರಂಗದ ಬಗ್ಗೆ ಆತಂಕ ಮತ್ತು ಕಾಳಜಿ ವ್ಯಕ್ತಪಡಿಸಿದರು. 'ಕುಲಗೆಟ್ಟ ತಮಿಳು, ತೆಲುಗು, ಹಿಂದೀ ಚಿತ್ರಗಳು ಕನ್ನಡ ಸಂವಾದ ಜೋಡಿಸಿಕೊಂಡು ಕನ್ನಡ ಚಿತ್ರಗಳೆಂದು ವಿಜೃಂಭಿಸುತ್ತಿವೆ. ಇವುಗಳ ಹಾವಳಿ ತಡೆಗಟ್ಟದಿದ್ದರೆ ಕನ್ನಡ ಚಿತ್ರಗಳು ಹೇಳಹೆಸರಿಲ್ಲವಾಗುತ್ತವೆ' ಎಂದು ಎಚ್ಚರಿಸಿದರು.

ಮಣಿಪಾಲ ಸಮ್ಮೇಳನದಲ್ಲಿನ ಕೃಷ್ಣರಾಯರ ಮಾತುಗಳು, ಕನ್ನಡ ಚಿತ್ರರಂಗದ 'ಡಬ್ಬಿಂಗ್ ವಿರೋಧಿ ನೀತಿ'ಗೊಂದು ತಾತ್ವಿಕ ತಳಹದಿ ಒದಗಿಸಿಕೊಟ್ಟವು ಎನ್ನಬಹುದು. ನಂತರದ ದಿನಗಳಲ್ಲಿ ಕನ್ನಡ ಚಳವಳಿಕಾರರು ಡಬ್ಬಿಂಗ್ ವಿರೋಧಿಸಿ ಬೀದಿಗಿಳಿದರು ಹಾಗೂ ಬೆಂಗಳೂರಿನ ಕೆಂಪೇಗೌಡ ರಸ್ತೆಯ ಪ್ರಮುಖ ಚಿತ್ರಮಂದಿರಗಳಲ್ಲಿ ಕನ್ನಡ ಸಿನಿಮಾಗಳನ್ನು ಪ್ರದರ್ಶಿಸಬೇಕೆಂದು ಒತ್ತಾಯಿಸಿದರು. 'ಕನ್ನಡ ಸಂಯುಕ್ತ ರಂಗ' ಡಬ್ಬಿಂಗ್ ವಿರೋಧಿ ಚಳವಳಿ ಹಮ್ಮಿಕೊಂಡಿತು. ಇದೆಲ್ಲದರ ಪರಿಣಾಮವಾಗಿ ಡಬ್ಬಿಂಗ್ ಸಂಸ್ಕೃತಿ ಕನ್ನಡದಲ್ಲಿ ಕ್ರಮೇಣವಾಗಿ ನಿಂತುಹೋಯಿತು. ಆದರೆ, ಹತ್ತು ವರ್ಷಗಳ ಬಳಿಕ ಕೆಲವು ಹಿಂದಿ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವ ಪ್ರಯತ್ನಗಳು ನಡೆದವು. ಡಬ್ಬಿಂಗ್ ವಿರೋಧಿ ದನಿ ಮತ್ತೆ ಪ್ರಬಲವಾಗಿ ಕೇಳಿಸಿದ್ದರಿಂದ ಆ ಪ್ರಯತ್ನಗಳೂ ನಿಂತುಹೋದವು. ಆ ಹೊತ್ತಿಗೆ ಅಸ್ತಿತ್ವಕ್ಕೆ ಬಂದಿದ್ದ, ಕನ್ನಡ ಚಲನಚಿತ್ರೋದ್ಯಮದ ಎಲ್ಲ ವಲಯಗಳ ಪ್ರಾತಿನಿಧಿಕ ಸಂಸ್ಥೆಯಾದ 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ' ಡಬ್ಬಿಂಗ್ ವಿರುದ್ಧ ನಿರ್ಣಾಯಕ ನಿಲುವು ತಳೆಯಿತು. ಡಬ್ಬಿಂಗ್ ವಿರೋಧಿ ಚಳವಳಿಗೆ ಪೂರಕವಾಗಿ ಕನ್ನಡದಲ್ಲಿ ಕಾದಂಬರಿ ಆಧಾರಿತ ಚಿತ್ರಗಳ ಸಂಖ್ಯೆಯೂ ಹೆಚ್ಚಾಗತೊಡಗಿದ್ದು ಗಮನಾರ್ಹ. ಕನ್ನಡ ಚಿತ್ರಗಳಿಗೆ ಸಿಕ್ಕ ಪ್ರೋತ್ಸಾಹ, ಚೆನ್ನೈನಲ್ಲಿ ನೆಲೆ ನಿಂತಿದ್ದ ಚಿತ್ರರಂಗ ತವರಿಗೆ ಬರಲು ಪ್ರೇರಣೆಯಾಯಿತು.

ರಾಜ್‌ಕುಮಾರ್ ನಿಧನದೊಂದಿಗೆ 'ಡಬ್ಬಿಂಗ್ ಬೇಕು' ಎನ್ನುವ ಕೂಗು ಮತ್ತೆ ಪ್ರಬಲವಾಯಿತು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಡಬ್ಬಿಂಗ್‌ಗೆ ಅವಕಾಶವಿಲ್ಲ ಎನ್ನುವವಾದಕ್ಕೆ ಕಾನೂನಿನಸಮ್ಮತಿಯೂಲಭಿಸಿತು. ಡಬ್ಬಿಂಗ್ ಒಲವು ಚಿತ್ರೋದ್ಯಮದೊಳಗಿನಿಂದಲೂ ವ್ಯಕ್ತವಾದುದರಿಂದ ಈಗ ಕರ್ನಾಟಕ ಡಬ್ಬಿಂಗ್‌ಗೆ ಮುಕ್ತವಾಗಿದೆ. ■

೯೦ ಕನ್ನಡ ಸಿನಿಮಾ



## ನಿರ್ದೇಶನಕ್ಕೆ ತಾರಾವರ್ಚಸ್ಸಿನ ಪುಟ್ಟಣ್ಣ ಕಣಗಾಲ್

**ಪುಟ್ಟಣ್ಣ ಕಣಗಾಲ್** ನಿಸ್ಸಂದೇಹವಾಗಿ ಕನ್ನಡ ಚಿತ್ರರಂಗದ ಮೊಟ್ಟ ಮೊದಲ ತಾರಾ ವರ್ಚಸ್ಸಿನ ನಿರ್ದೇಶಕ. ಬಿ.ಆರ್. ಪಂತುಲು, ಆರ್. ನಾಗೇಂದ್ರ ರಾವ್, ಶಂಕರ್‌ಸಿಂಗ್, ಎಂ.ಆರ್. ವಿಠಲ್, ಟಿ.ವಿ. ಸಿಂಗ್ ಠಾಕೂರ್‌ರಂಥ ನಿರ್ದೇಶಕರು ಉತ್ತಮ ಚಿತ್ರಗಳ ಮೂಲಕ ನಿರ್ದೇಶಕರಾಗಿ ಜನಪ್ರಿಯತೆಯನ್ನು ಗಳಿಸಿದ್ದರೂ, ನಾಯಕ ನಟನಂತೆ ನಿರ್ದೇಶಕನೂ ತಾರಾ ವರ್ಚಸ್ಸು ಗಳಿಸಬಹುದು, ನಿರ್ದೇಶಕರ ಹೆಸರಿನಿಂದಲೇ ಸಿನಿಮಾಗಳನ್ನು ಗುರ್ತಿಸಬಹುದು ಎನ್ನುವುದನ್ನು ತೋರಿಸಿಕೊಟ್ಟವರು ಪುಟ್ಟಣ್ಣ ಕಣಗಾಲ್. ತ್ರಿವೇಣಿ ಅವರ ಕಾದಂಬರಿಯನ್ನು ಆಧರಿಸಿದ 'ಬೆಳ್ಳಿಮೋಡ' (1967) ಪುಟ್ಟಣ್ಣನವರು ಸ್ವತಂತ್ರವಾಗಿ ನಿರ್ದೇಶಿಸಿದ ಚೊಚ್ಚಲ ಸಿನಿಮಾ. 'ಮಲ್ಲಮ್ಮನ ಪವಾಡ', 'ಕಪ್ಪುಬಿಳುಪು', 'ಗೆಜ್ಜೆಪೂಜೆ', 'ಕರುಳಿನ ಕರೆ', 'ಶರಪಂಜರ', 'ಸಾಕ್ಷಾತ್ಕಾರ', 'ನಾಗರಹಾವು', 'ಎಡಕಲ್ಲು ಗುಡ್ಡದ ಮೇಲೆ', 'ಉಪಾಸನೆ', 'ಕಥಾಸಂಗಮ', 'ಬಿಳಿ ಹೆಂಡ್ತಿ', 'ರಂಗನಾಯಕಿ', 'ಮಾನಸ ಸರೋವರ' – ಇವು ಪುಟ್ಟಣ್ಣನವರ ನಿರ್ದೇಶನದ ಕೆಲವು ಜನಪ್ರಿಯ ಸಿನಿಮಾಗಳು.

ಆಯಾಮ ನಾಲ್ಕು

ಭಾವೋತ್ಕರ್ಷದ, ವಿಶೇಷವಾಗಿ ಹೆಣ್ಣಿನ ಮಾನಸಿಕ ಸಂಘರ್ಷದ ಕಥನಗಳ ನಿರೂಪಣೆಗೆ ಪುಟ್ಟಣ್ಣ ಪ್ರಸಿದ್ಧರು. ಪುಟ್ಟಣ್ಣನವರ ಸಿನಿಮಾಗಳಲ್ಲಿ ನಟಿಸಿದ ಕಲ್ಪನಾ, ಆರತಿ, ಜಯಂತಿ, ಮುಂತಾದ ನಟಿಯರು ಅಭಿನೇತ್ರಿಯರಾಗಿ ಪ್ರಸಿದ್ಧರಾದರು.

ಪುಟ್ಟಣ್ಣ ಕಣಗಾಲರ ಬಹುತೇಕ ಸಿನಿಮಾಗಳು ಸಾಹಿತ್ಯ ಕೃತಿಗಳನ್ನಾಧರಿಸಿವೆ. ಕನ್ನಡದ ಪ್ರಸಿದ್ಧ ಕವಿಗಳ ಗೀತೆಗಳನ್ನು ಸಿನಿಮಾಗಳಿಗೆ ಅಳವಡಿಸಿದ್ದೂ ಪುಟ್ಟಣ್ಣನವರ ಮತ್ತೊಂದು ಅಗ್ಗಳಿಕೆ. ವಿಷ್ಣುವರ್ಧನ್, ಅಂಬರೀಷ್, ಆರತಿ, ಶ್ರೀಧರ್, ವಜ್ರಮುನಿ ಸೇರಿದಂತೆ ಅನೇಕ ಕಲಾವಿದರನ್ನು ಪರಿಚಯಿಸಿದ ಕೀರ್ತಿಯೂ ಅವರಿಗೆ ಸಲ್ಲಬೇಕು. ಕನ್ನಡ ಚಿತ್ರರಂಗಕ್ಕೆ ಗಣನೀಯ ಸೇವೆ ಸಲ್ಲಿಸಿದ ನಿರ್ದೇಶಕರನ್ನು ಕರ್ನಾಟಕ ಸರ್ಕಾರ ಪುಟ್ಟಣ್ಣ ಕಣಗಾಲರ ಹೆಸರಿನ ಪ್ರಶಸ್ತಿಯ ಮೂಲಕ ಗೌರವಿಸುತ್ತಿದೆ.

ಪುಟ್ಟಣ್ಣ ಕಣಗಾಲರು ಕನ್ನಡದ ಮುಖ್ಯವಾಹಿನಿ ಸಿನಿಮಾಗಳ ಯಶಸ್ವೀ ನಿರ್ದೇಶಕರ ಪ್ರತಿನಿಧಿಯೂ ಹೌದು. ದೊರೈ–ಭಗವಾನ್, ಎಸ್.ವಿ. ರಾಜೇಂದ್ರಸಿಂಗ್ ಬಾಬು, ವಿಜಯಾರೆಡ್ಡಿ, ಭಾರ್ಗವ, ಜಿ. ರಾಜಶೇಖರ್, ಗೀತಪ್ರಿಯ, ಎಸ್. ನಾರಾಯಣ್, ನಾಗತಿಹಳ್ಳಿ ಚಂದ್ರಶೇಖರ್ ಸೇರಿದಂತೆ ಹಲವು ನಿರ್ದೇಶಕರು ಕನ್ನಡದ ಮುಖ್ಯವಾಹಿನಿ ಸಿನಿಮಾಗಳನ್ನು ಕಾಲಕಾಲಕ್ಕೆ ಪೋಷಿಸಿದ್ದಾರೆ. ■